

ಗೋವರ್ಧನ ಗಿರಿಧಾರಿ – ಹಳೇಬೀಡು ಪ್ರತಿಮೆ

ವರ್ಧನೆಗೆ ಕಾರಣನಾದ. ಮಾತುಗಳಿಂದ (ಗೋ) ವರ್ಣಿಸಲಾಗದ ಸೌಂದರ್ಯ ರಸಭಾವ ವರ್ಧನನಾದ. ಕೃಷ್ಣಪ್ರೇಮಿ ಭಕ್ತರೆಲ್ಲರ ಆರಾಧ್ಯನಾದ.

ಇಂತಹ ಕೃಷ್ಣಪ್ರೇಮಿ ಭಕ್ತರ ಸಾಲಿನಲ್ಲಿ ಚೈತನ್ಯ ಮಹಾಪ್ರಭುಗಳ ಕೃಷ್ಣಭಕ್ತಿಯ ಸ್ವರೂಪ ವಿಭಿನ್ನವೂ ವಿಶಿಷ್ಟವೂ ಆದುದು. ರಾಧಾಭಾವದಲ್ಲಿ ಭಗವದ್ಭಾವವನ್ನು ಸದಾ ಅನುಭವಿಸುತ್ತಿದ್ದ ಶ್ರೀಚೈತನ್ಯ ಮಹಾಪ್ರಭುಗಳೂ ಈ ಪರ್ವತದ ದರ್ಶನ ಮಾಡಿದ್ದಾರೆ. ಇದರ ಅಲೌಕಿಕ ಸೌಂದರ್ಯ ಕಂಡು ಭಾವಪರವಶರಾಗಿ ಆನಂದತುಂದಿಲರಾಗಿದ್ದಾರೆ. ಅವರಿಗೆ ಈ ಪರ್ವತದಲ್ಲಿರುವ ಸ್ಥಾವರ ಜಂಗಮ ಜೀವಗಳೆಲ್ಲವೂ ಚಿನ್ಮಯವಾಗಿ ಭಾಸವಾಯಿತು. ಅಲ್ಲಿನ ಗಿಡ ಮರ ಬಳ್ಳಿ ಪಶು ಪಕ್ಷಿ ಮೊದಲಾದ ಎಲ್ಲವೂ ಭಗವತ್ಪ್ರೇಮದಿಂದ ಮಧು ಸುರಿಸುತ್ತಿರುವಂತೆ ಕಂಡಿತು. ಅಲ್ಲಿ ಶ್ರೀಕೃಷ್ಣನು ತೋರಿದ ಹಲವು ಲೀಲೆಗಳ ಸ್ಮರಣೆಯಿಂದ ಅವರ ರಾಧಾಭಾವ ಉದ್ದೀಪಿತವಾಗಿ ಗೋವರ್ಧನ ಪರ್ವತದ ದರ್ಶನ ಮಾತ್ರದಿಂದ ಬಾಹ್ಯಜ್ಞಾನ ಶೂನ್ಯರಾಗಿ ನೆಲದ ಮೇಲೆ ಉರುಳಿಬಿದ್ದರು. ವೃಂದಾವನದ ಕಾಡಿನಲ್ಲಿ ಸಂಚರಿಸುವಾಗ ಅವರ ಪ್ರೇಮ ಲಕ್ಷಪಟ್ಟು ಹೆಚ್ಚಾಯಿತು. ಅಲ್ಲಿ ಹಗಲು ರಾತ್ರಿ ಕೃಷ್ಣಪ್ರೇಮದಿಂದ ತುಂಬಿ ಹೋಗಿ ಅವರು ಸ್ನಾನ ಭಿಕ್ಷಾದಿ ಶಾರೀರಿಕ ಉಪಚಾರಗಳನ್ನು ಯಾಂತ್ರಿಕವಾಗಿ ಮಾಡುತ್ತಿದ್ದರು. ಗೋವರ್ಧನ ಪರ್ವತದ ಪಾದಪ್ರದೇಶದಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿ ಅದರ ಒಂದು ಶಿಲೆಯನ್ನು ತೆಗೆದು ಎದೆಗಪ್ಪಿಕೊಂಡರು. ಪ್ರೇಮೋನ್ಮತ್ತರಾಗಿ ಬಹಳ ಹೊತ್ತು ಸ್ತೋತ್ರ ಪ್ರಾರ್ಥನೆಗಳಲ್ಲಿ ಮುಳುಗಿ ಹೋದರು.

ಪುರಿಯಲ್ಲಿ ಸಮುದ್ರದ ದಡದಲ್ಲಿರುವ ಸಣ್ಣಗಿರಿ ಚಟಕ ಪರ್ವತವನ್ನು ನೋಡಿದಾಗಲೂ ಅವರು ಗೋವರ್ಧನನ ಸ್ಮರಣೆಯಿಂದ ತುಂಬಿಹೋಗಿ ಭಾವಾವಿಷ್ಟರಾದರು. ಅವರ ಪ್ರತಿಯೊಂದು ರೋಮಕೂಪವೂ ಗುಳ್ಳೆಯಂತೆ ಬಾತುಕೊಂಡಿತ್ತು, ಎರಡೂ ಕಣ್ಣುಗಳಿಂದ ಅಶ್ರುಧಾರೆ ಸುರಿಯುತ್ತಿತ್ತು. 'ಕೃಷ್ಣ ಅಲ್ಲಿ ಹಸುಗಳನ್ನು ಮೇಯಿಸುತ್ತಿರುವುದನ್ನೂ, ವೇಣುಗಾನ ಮಾಡುತ್ತಾ ನಲಿಯುತ್ತಿರುವುದನ್ನೂ ಆ ಪರ್ವತದ ನಾಲ್ಕೂ ಕಡೆಗಳಲ್ಲಿ ನಾನು ಕಂಡೆ. ಕೃಷ್ಣನ ಕೊಳಲು ಗಾನದ ಸೆಳತದಿಂದ ರಾಧಾರಾಣಿಯೂ ಅಲ್ಲಿಗೆ ಬಂದಿದ್ದಳು. ಆ ರಮಣೀಯ ದೃಶ್ಯ ಆ ಅನುಪಮ ಭಾವ ಸೌಂದರ್ಯವನ್ನು ವರ್ಣಿಸಲು ಸಾಧ್ಯವೇ ಇಲ್ಲ' ಎಂದು ಅವರು ತಮ್ಮ ಭಾವವನ್ನು ತನ್ನ ಯಾತ್ರಾಕಾಲದ ಒಡನಾಡಿಗಳಿಗೆ ತಿಳಿಸಿದರೆಂದು ***ಚೈತನ್ಯ ಚರಿತಾಮೃತ***ದಲ್ಲಿ ದಾಖಲು ಮಾಡಲಾಗಿದೆ.

ಶ್ರೀರಾಮಕೃಷ್ಣ ಪರಮಹಂಸರೂ ಮಥುರಬಾಬುವಿನೊಡನೆ ತೀರ್ಥಯಾತ್ರೆ ಮಾಡಿದ ಸಂದರ್ಭದಲ್ಲಿ ಗೋವರ್ಧನ ಗಿರಿಯನ್ನೂ ಸಂದರ್ಶಿಸಿದ್ದರು. ''ಗಿರಿಯನ್ನು ನೋಡಿದವನೇ ಆವೇಶಭರಿತನಾಗಿ ಓಡಿದೆ, ಒಂದೇ ಓಟಕ್ಕೆ ಪರ್ವತದ ಶಿಖರ ಮುಟ್ಟಿ ಬಾಹ್ಯಶೂನ್ಯನಾಗಿ ನಿಂತೆ. ದಾರಿಯಲ್ಲಿ ಕೃಷ್ಣ ಲೀಲೆಗಳ ಸ್ಮರಣೆ ಬರುವ ಹುಲ್ಲುಬಯಲು, ಹಸಿರುವನರಾಶಿ, ಪಶುಪಕ್ಷಿ ಜಿಂಕೆಗಳನ್ನು ನೋಡಿ, ಕೃಷ್ಣಭಾವ ತುಂಬಿ ಬಂದು ಕಣ್ಣಿನಿಂದ ಕಣ್ಣೀರು ಧಾರೆಧಾರೆಯಾಗಿ ಹರಿದು ಬಟ್ಟೆ ಎಲ್ಲಾ ಒದ್ದೆಯಾಗಿ ಹೋಯಿತು. ನಾನೆಂದುಕೊಂಡೆ – ಶ್ರೀಕೃಷ್ಣ, ನಿನ್ನ ಸಂಪರ್ಕದಿಂದ ಪುನೀತವಾದ ಎಲ್ಲವೂ ಇವೆ, ಆದರೆ ನಿನ್ನನ್ನು ಮಾತ್ರ ಕಾಣೆನಲ್ಲ !'' ಎಂದು ತಮ್ಮ ಅನುಭವವನ್ನು ಅವರೇ ಹೇಳಿಕೊಂಡಿದ್ದಾರೆ. ಅವರಿಗೆ ನಿಧುವನ, ಗೋವರ್ಧನ ಮೊದಲಾದ ಕ್ಷೇತ್ರಗಳು ಬೃಂದಾವನಕ್ಕಿಂತ ಹೆಚ್ಚು ಪ್ರಿಯವಾಗಿತ್ತು. ರಾಧಾಭಾವದಲ್ಲಿ ಸಾಧನೆ ಮಾಡಿದ ಅವರಿಗೆ ಈ ಕ್ಷೇತ್ರದಲ್ಲಿ ವಿಶೇಷವಾದ ಪ್ರೇಮ ಉದಯಿಸಿತ್ತು.

ಶ್ರೀಕೃಷ್ಣನು ತನ್ನ ದಿವ್ಯಧಾಮವನ್ನು ಸೇರಿದ ಸಹಸ್ರಾರು ವರ್ಷಗಳ ನಂತರವೂ ಅವತಾರ ಸ್ವರೂಪಿಗಳಾದ ಪರಮ ಪುರುಷರ ಸ್ಪರ್ಶ ಸಂಪರ್ಕಗಳಿಂದ ತನ್ನ ಪಾವನತ್ವವನ್ನೂ ಅಂತೆಯೇ ಕಾಯ್ದುಕೊಂಡಿರುವ ಗೋವರ್ಧನನೇ ಧನ್ಯ. ಅಂತಹ ಪವಿತ್ರತಮ ಗಿರಿಯನ್ನು ಧರಿಸಿರುವ ಧರಣಿಯೇ ಧನ್ಯ.



# ಅನಾರೋಗ್ಯದ ಆಸರೆ!

**ಡಿ. ಎಂ. ಹೆಗಡೆ**

ನೆಮ್ಮದಿಯ ಬದುಕಿಗೆ ದೇಹ, ಮನಸ್ಸುಗಳ ಸಮತೋಲನ, ಆರೋಗ್ಯ ಅತ್ಯಗತ್ಯವಾಗಿದೆ. ಈಚಿನ ದಿನಗಳಲ್ಲಿ ರೋಗ, ಚಿಕಿತ್ಸೆಗಳು ಹೊಸ ರೂಪಗಳನ್ನು ಪಡೆದುಕೊಂಡು ನಮ್ಮನ್ನು ಕಾಡುತ್ತಿರುವ ಬಗೆಯನ್ನು ವಿವರಿಸಿರುವ ಲೇಖಕರು ಬೆಂಗಳೂರಿನಲ್ಲಿ ಸಂಮೋಹನ ಚಿಕಿತ್ಸಾ ತಜ್ಞರೂ, ಆಪ್ತ ಸಲಹೆಗಾರರೂ, ತರಬೇತುದಾರರೂ ಆಗಿದ್ದಾರೆ. ಅವರು ಉತ್ತಮ ಲೇಖಕರೂ ಹೌದು.

**ನಾ**ವೆಲ್ಲರೂ ಆರೋಗ್ಯಪೂರ್ಣ ಜೀವನವನ್ನು ಇಷ್ಟಪಡುತ್ತೇವೆ. ಆರೋಗ್ಯವಂತರಾಗಿರಬೇಕೆಂತ ಆಶಿಸುತ್ತೇವೆ. ಅದಕ್ಕಾಗಿಯೇ ಬಹಳಷ್ಟು ಶ್ರಮಪಡುತ್ತೇವೆ. 'ಆರೋಗ್ಯವೇ ಭಾಗ್ಯ' ಅಂತ ನಂಬಿಕೊಂಡಿದ್ದೇವೆ. ಬದುಕಿನ ಎಲ್ಲಾ ಭಾಗ್ಯಗಳನ್ನು ಅನುಭವಿಸಲಿಕ್ಕೆ ಆರೋಗ್ಯಭಾಗ್ಯ ಇರಬೇಕು ಎನ್ನುವುದನ್ನು ಕಂಡುಕೊಂಡಿದ್ದೇವೆ. ಆರೋಗ್ಯವಂತರ ಶರೀರದ ಠೇಂಕಾರ ಮತ್ತು ಅವರ ಮನಸ್ಸಿನ ಉತ್ಸಾಹವನ್ನು ನೋಡುವುದೇ ಚಂದ. ಅವರ ಜೀವನೋತ್ಸಾಹದ ಕಾಂತಿಯೇ ಚಂದ. ಆರೋಗ್ಯವಂತ ವ್ಯಕ್ತಿ ನಿಂತಲ್ಲಿ, ಕೂತಲ್ಲಿ ಸೌಂದರ್ಯ ಹೊರಹೊಮ್ಮುತ್ತದೆ. ಸುತ್ತಲಿನವರ ಕಣ್ಣೋಟ ಕ್ಷಣಕ್ಕಾದರೂ ಅವರನ್ನು ಆವರಿಸುತ್ತದೆ. ಅಕಸ್ಮಾತ್ ಆರೋಗ್ಯವೇ ಸರಿಯಾಗಿ ಇಲ್ಲದಿದ್ದರೆ, ಏನಿದ್ದರೇನು ಪ್ರಯೋಜನ? ಆರೋಗ್ಯವಿಲ್ಲದವರ ಬದುಕಿನಲ್ಲಿ ಸಂತೋಷ ಇರುವುದಿಲ್ಲ. ಸಂತೋಷವಿಲ್ಲದ ಬದುಕನ್ನು ಯಾರೂ ಬಯಸುವುದಿಲ್ಲ. ಇದು ನಮ್ಮೆಲ್ಲರ ಬದುಕಿನ ರೀತಿ.

ಈ ಆಲೋಚನೆಗೆ ತೀರಾ ಭಿನ್ನವಾದ ಬಹಳ ವಿಚಿತ್ರವಾದ ಇನ್ನೊಂದು ವಿಷಯವಿದೆ. ಅದನ್ನು ಕೇಳಿದರೆ, 'ಹೀಗೂ ಉಂಟೇ!?' ಅಂತ ನೀವು ಹುಬ್ಬೇರಿಸಬಹುದು. ಆರೋಗ್ಯವನ್ನು ಪ್ರೀತಿಸುವವರಿರುವಂತೆಯೇ, ಅನಾರೋಗ್ಯವನ್ನು ಪ್ರೀತಿಸುವವರಿರುತ್ತಾರೆ! ತಮ್ಮ ಮನಸ್ಸು ಹಾಗೂ ಶರೀರದಲ್ಲಿ ಅನಾರೋಗ್ಯವನ್ನು ಸಲಹುತ್ತ ಇರುತ್ತಾರೆ. ಇವರು ಅನಾರೋಗ್ಯದ ಆಸರೆಯನ್ನು ಪಡೆದುಕೊಂಡಿರುತ್ತಾರೆ! ಅನಾರೋಗ್ಯವನ್ನು ಆಕರ್ಷಿಸುತ್ತ ಇರುತ್ತಾರೆ.

ಹೀಗೆ ಹೇಳಿದರೆ ತಕ್ಷಣಕ್ಕೆ ನೀವು ನಂಬಲಾರಿರಿ. ಇಂತಹ ವ್ಯಕ್ತಿಗಳ ಲಕ್ಷಣವನ್ನು ಹೇಳಿದರೆ, ನೀವು ನಿಮ್ಮ ಪರಿಚಯದವರಲ್ಲಿ ಅಥವಾ ನಿಮ್ಮ ನೆರೆಹೊರೆಯಲ್ಲಿ ಇರಬಹುದಾದ ಇಂತಹವರನ್ನು ಗುರುತಿಸಬಹುದು. ಅಕಸ್ಮಾತ್ ನಿಮ್ಮಲ್ಲಿಯೇ ಇಂತಹ ಗುಣಲಕ್ಷಣಗಳು ಕಂಡುಬಂದರೆ ಪ್ರಾಮಾಣಿಕವಾಗಿ ಗಮನಿಸಿಕೊಳ್ಳಬಹುದು.

ಅನಾರೋಗ್ಯ ಪ್ರಿಯರನ್ನು ನೀವು ಯಾವಾಗ ಮಾತನಾಡಿಸಿದರೂ ಕೂಡ, ಅವರು ತಮ್ಮ ಅನಾರೋಗ್ಯದ ಬಗ್ಗೆಯೇ ಮಾತನಾಡುತ್ತಾರೆ. ತಮ್ಮ ಅನಾರೋಗ್ಯಕ್ಕೆ ಸಾಕಷ್ಟು ಕಾರಣಗಳನ್ನು ಕೊಡುತ್ತಾರೆ. ನಿಮ್ಮಿಂದ ಒಂದಿಷ್ಟು ಸಾಂತ್ವನದ ಮಾತುಗಳನ್ನು ಅಪೇಕ್ಷಿಸುತ್ತಾರೆ. ಹಾಗಂತ ಅವರಲ್ಲಿ ಬಹುತೇಕರಿಗೆ ತಾವು ಬುದ್ಧಿಪೂರ್ವಕವಾಗಿ ನೋವಿನ ಆಸರೆಯನ್ನು ಪಡೆದುಕೊಂಡಿರುವ ಬಗ್ಗೆ ಖಂಡಿತವಾಗಿಯೂ ತಿಳಿದಿರುವುದಿಲ್ಲ. ಆದರೆ ನೋವು ಮಾತ್ರ ಅವರ ವ್ಯಕ್ತಿತ್ವದ ಅಂಗವಾಗಿರುತ್ತದೆ. ಅನಾರೋಗ್ಯವಿಲ್ಲದೇ (ನೋವಿಲ್ಲದೇ) ಅವರಿಲ್ಲ ಅಂತಾಗಿರುತ್ತದೆ.

'ಚೆನ್ನಾಗಿದ್ದೀರಾ?' ಅಂತ ನೀವು ಕೇಳಿದರೆ ಸಾಕು, ಅವರು, 'ಏನೋ ಇದ್ದೀನಪ್ಪಾ. ಏನು ಚೆನ್ನವೋ ಏನೋ, ಬೆಳಗ್ಗೆ ಹಾಸಿಗೆಯಿಂದ ಏಳುವಾಗಲೇ ಈ ತಲೆನೋವು ಹಿಡಿದುಕೊಂಡಿರುತ್ತದೆ! ಇಡೀ ದಿನ ನರಕಯಾತನೆ..' ಅಂತ ಹೇಳುತ್ತಾರೆ. ಇನ್ನು ಕೆಲವರು, 'ಹೊಟ್ಟೆಯಲ್ಲಿ ಒಂಥರಾ ಕಿರಿಕಿರಿಯಾಗುತ್ತಿದೆ, ಮಾರಾಯಾ! ಹಸಿವಾಗುತ್ತದೆ. ಆದರೆ, ತಿನ್ನಲಿಕ್ಕೆ ಮನಸ್ಸಾ

ಗುವುದಿಲ್ಲ' ಅಂತ ಎರಡು ಸುತ್ತು ತಮ್ಮ ಹೊಟ್ಟೆಯನ್ನು ನೀವಿ ಕೊಳ್ಳುತ್ತಾರೆ. ಮತ್ತೆ ಕೆಲವರು ತಮ್ಮ ಅನಾರೋಗ್ಯದ ಬಗ್ಗೆ ಹೇಳುತ್ತಾ, ನಿಮ್ಮ ಆರೋಗ್ಯದ ಬಗ್ಗೆ ತಮ್ಮದೇ ರೀತಿಯಲ್ಲಿ ಕೊಂಕು ಮಾತನಾಡುತ್ತಾರೆ. ನೀವು ಅವರಿಗೆ ಲೋಕರೂಢಿಯ ಮಾತುಗಳನ್ನಾಡಿಯೋ, ನಿಮ್ಮನ್ನು ಹಿಂದೊಮ್ಮೆ ಕಾಡಿದ್ದ ಹೊಟ್ಟೆಯ ತೊಂದರೆಯ ಬಗ್ಗೆ ನಾಲ್ಕು ಮಾತುಗಳನ್ನಾಡಿಯೋ, ಅವರಿಗೆ ಧೈರ್ಯ ಹೇಳುತ್ತೀರಿ. ಇನ್ನಷ್ಟು ಕಾಳಜಿಪೂರ್ವಕವಾಗಿ ಅವರಿಗೆ 'ನೀವು, ಆಸ್ಪತ್ರೆಗೆ ಹೋಗಿದ್ದೀರಾ? ಒಳ್ಳೆಯ ವೈದ್ಯರಿಗೆ ತೋರಿಸಿದ್ದೀರಾ?' ಅಂತ ಕೇಳಿದರೋ, ಅವರ ನೋವಿನ ಇತಿಹಾಸ ಹಾಗೂ ಅವರ ದುರದೃಷ್ಟದ ಪುರಾಣವನ್ನು ಶುರು ಮಾಡುತ್ತಾರೆ. 'ಎಷ್ಟೊಂದು ಆಸ್ಪತ್ರೆಗಳಿಗೆ ಅಲೆದದ್ದಾಯಿತು. ಎಷ್ಟೊಂದು ಡಾಕ್ಟರರಿಗೆ ತೋರಿಸಿದ್ದಾಯಿತು. ಯಾವ ಡಾಕ್ಟರಿಂದಲೂ ಕಡಿಮೆ ಮಾಡಕ್ಕಾಗಿಲ್ಲರೀ!' ಅಂತ ಹೇಳುತ್ತಾರೆ. ಅವರು ಒಂದಿಷ್ಟು ಹೆಮ್ಮೆಯಿಂದಲೇ ಮಾತನಾಡುವಂತೆ ಅನ್ನಿಸುತ್ತದೆ. 'ವರ್ಷಗಳಿಂದ ಎಷ್ಟೆಲ್ಲ ಔಷಧಿ – ಮಾತ್ರೆ ತಿಂದಿದ್ದಾಯಿತು ಕಡಿಮೇನೇ ಆಗುತ್ತಿಲ್ಲ ಕರ್ಮದ್ದು' ಅಂತ ವಿಷಾದದಿಂದಲೂ ಹೇಳುತ್ತಾರೆ. 'ಎಷ್ಟೂಂತ ಡಾಕ್ಟರಿಗೆ ತೋರಿಸೋದು, ಎಷ್ಟೂಂತ ಗುಳಿಗೆ ತಿನ್ನೋದು? ಪೇನ್ ಕಿಲ್ಲರ್ ತಿಂದಾಗ ಸ್ವಲ್ಪ ಆರಾಮ ಅಂತ ಅನ್ನಿಸುತ್ತದೆ. ಅದರ ಪ್ರಭಾವ ಮುಗಿಯುತ್ತಿದ್ದಂತೆಯೇ ಮತ್ತೆ ನೋವು ಶುರುವಾಗುತ್ತದೆ. ಹೀಗೇ ದಿನಕಳೆಯಬೇಕೂಂತ ಹಣೆಯಲ್ಲಿಯೇ ಬರೆದಿದೇಂತ ಕಾಣುತ್ತದೆ!' ಅಂತ ಮತ್ತೂ ನರಳುತ್ತಾರೆ. ಅವರ ನೋವಿನ ಕತೆಗೆ ಬಹಳ ವರ್ಷಗಳ ಇತಿಹಾಸವೂ ಇರುತ್ತದೆ. ಅವರು ಅನುಭವಿಸುತ್ತಿರುವ ತಲೆ ನೋವು, ಕಾಲುನೋವು, ಅಂಗಾಲಿನ ಉರಿ, ಆಗಾಗ ಕೈಕಾಲು ನಡುಗುವುದು ಅಥವಾ ಬೇರೆ ಯಾವುದೋ ನೋವು ಅವರ ಮುಖದಲ್ಲಿಯೇ ನಿಮಗೆ ಕಾಣುತ್ತದೆ.

ಅವರು ಯಾವಾಗಲೂ ತಮ್ಮ ಮುಖದಲ್ಲಿ ಯಾತನೆಯನ್ನು ವ್ಯಕ್ತಪಡಿಸುತ್ತಲೇ ಇರುತ್ತಾರೆ. ತಮ್ಮ ಯಾತನೆಯಿಂದ ತಮಗಷ್ಟೇ ಅಲ್ಲ ತಮ್ಮ ಮನೆಯವರಿಗೂ ನೆಮ್ಮದಿಯಿಲ್ಲ ಅಂತಲೂ ಅವರು ಹೇಳುತ್ತಾರೆ. 'ಮನುಷ್ಯರಾಗಿ ಹುಟ್ಟಿದ ನಂತರ ಯಾವಾಗಲೂ ಆರೋಗ್ಯವಾಗಿ, ಯಾವಾಗಲೂ ಸಂತೋಷದಿಂದ ಇರಕ್ಕಾಗುತ್ಯೆ?' ಅಂತಲೂ ಕೆಲವರು ಪ್ರಶ್ನಿಸುತ್ತಾರೆ. ಕಳೆದ ಜನ್ಮದ್ದೋ, ಈ ಜನ್ಮದ್ದೋ ಕರ್ಮವನ್ನು ಅನುಭವಿಸುತ್ತ ಬದುಕಬೇಕು, ಅಂತೆಲ್ಲ ಅರೆವೇದಾಂತವನ್ನೂ ಮಾತನಾಡುತ್ತಾರೆ. ಆದರೆ ಅನಾರೋಗ್ಯದ ಆಸರೆಯಿಂದ ಹೊರಗೆ ಬರುವುದಕ್ಕಾಗಿ ಅವರು ಪ್ರಾಮಾಣಿಕ ಪ್ರಯತ್ನವನ್ನೇನೂ ಮಾಡುವುದಿಲ್ಲ, ತಮ್ಮ ತಲೆನೋವನ್ನೇ ಅವರು ತಮ್ಮ ಐಡೆಂಟಿಟಿಯನ್ನಾಗಿ ಮಾಡಿಕೊಂಡಿರುತ್ತಾರೆ. ತಮ್ಮ ಕಾಲುನೋವು ಕಡಿಮೆಯಾಗಿಬಿಟ್ಟರೆ ತನ್ನನ್ನು ಯಾರೂ ಗಮನಿಸುವುದಿಲ್ಲ ಅಂತ ಅಂದುಕೊಂಡಿರುತ್ತಾರೆ. ದಿನ ಕಳೆದಂತೆ ಅವರ ನೋವು ಬಂಗಾರದ ಬೆಲೆಯಂತೆ ಏರುತ್ತಲೇ ಇರುತ್ತದೆ!

'ನಿಮಗಂತೂ ನನ್ನ ತಲೆನೋವಿನ ಬಗ್ಗೆ ಕಾಳಜಿಯೇ ಇಲ್ಲ! ನೀವಾಯಿತು, ನಿಮ್ಮ ಕೆಲಸವಾಯಿತು.' ಅಂತ ಹೇಳುವ ಹೆಂಡತಿಯನ್ನೋ, 'ನನ್ನ ಅನಾರೋಗ್ಯದ ಬಗ್ಗೆ, ನನ್ನ ಟೆನ್ಶನ್ ಬಗ್ಗೆ ನಿನಗೆ ಒಂದಿಷ್ಟೂ ಕಾಳಜಿಯೇ ಇಲ್ಲ, ಯಾವಾಗ ನೋಡಿದರೂ ಶಾಪಿಂಗ್, ಮೀಟಿಂಗು, ದೇವಸ್ಥಾನ ಅಂತಿರ್ತೀಯಾ!..' ಎನ್ನುವ ಮಧ್ಯವಯಸ್ಕ ಗಂಡನನ್ನೋ ನೋಡಿರುತ್ತೀರಿ. ಇವರ ಮಾತುಗಳಲ್ಲಿಯೇ ಇವರ ಸಮಸ್ಯೆಯ ಪರಿಚಯ ಹಾಗೂ ಅದರ ಪರಿಹಾರೋಪಾಯ ಇರುತ್ತದೆ. ಅದನ್ನು ಸಂಬಂಧಪಟ್ಟವರು ಅರ್ಥಮಾಡಿಕೊಂಡು ಅದಕ್ಕೆ ಪೂರಕವಾಗಿ ಸ್ಪಂದಿಸಬೇಕಾಗುತ್ತದೆ.

ಇನ್ನು ಕೆಲವರಿಗೆ ಅಮಾವಾಸ್ಯೆ–ಹುಣ್ಣಿಮೆ ಸಮಯದಲ್ಲಿ ಇಂತಹ ಭಾವಾತಿರೇಕಗಳು ಉದ್ರೇಕಗೊಳ್ಳುತ್ತವೆ. ಖಿನ್ನತೆಗೆ ಒಳಗಾಗುತ್ತಾರೆ. ಅಸಹನೆಯಿಂದ ಸಿಡಿಮಿಡಿಗೊಳ್ಳುತ್ತಾರೆ. ಮನೆಯವರು ತನ್ನ ಬಗ್ಗೆ ಒಂದಿಷ್ಟೂ ಕಾಳಜಿಯನ್ನು, ಆಸ್ತೆಯನ್ನು ತೋರಿಸುವುದಿಲ್ಲ ಅಂತ ಅಂದುಕೊಳ್ಳುತ್ತಾರೆ. ತನ್ನ ಮಾತಿಗೆ ಇಲ್ಲಿರುವವರು ಕಿಂಚಿತ್ತೂ ಬೆಲೆ ಕೊಡುವುದಿಲ್ಲ ಅಂತ ಕೊರಗುತ್ತಾರೆ. ಅವರಿಗೆ ಚಿಕ್ಕ ಪುಟ್ಟ ವಿಷಯಕ್ಕೂ ಕೋಪ ಬರುತ್ತದೆ. ಅವರು ಇರುವ ಪರಿಸರವನ್ನವಲಂಬಿಸಿ ಅವರ ಕೋಪದ ತೀವ್ರತೆ ವ್ಯಕ್ತವಾಗುತ್ತದೆ. ಅವರು ತಮ್ಮ ಮಕ್ಕಳನ್ನು, ಸಂಗಾತಿಯನ್ನು, ಪಾಲಕರನ್ನು, ನೆರೆಯವರನ್ನು ಬಯ್ಯುತ್ತಿರುತ್ತಾರೆ.

ಸಾರಿಗೆ ಉಪ್ಪು ಕಡಿಮೆಯಾಯಿತೆಂದೋ, ಕಾಫಿಗೆ ಪೌಡರು ಜಾಸ್ತಿಯಾಯಿತೆಂದೋ, ಸಂತೆಯಿಂದ ತಂದ ತರಕಾರಿ ಒಣಗಿದೆಯೆಂದೋ, ಮೊಬೈಲಿನಲ್ಲಿ ನಗುನಗುತ್ತ ಉಲಿಯುವವರು ತನ್ನ ಹತ್ತಿರ ಮಾತ್ರ ಸಿಡುಕುತ್ತಾರೆಂದೋ... ಹೀಗೇ ನೂರಾರು ನವನವೀನ ಕಾರಣಗಳನ್ನು ಹುಡುಕಿ, ಹೆಕ್ಕಿ ಹರಿತವಾದ ಮಾತಿನಿಂದ ತನ್ನ ಮನೆಯವರನ್ನು ಝಾಡಿಸುತ್ತಿರುತ್ತಾರೆ. ತನ್ನ ನೋವು ಕಡಿಮೆಯಾಗದೇ ಇರಲಿಕ್ಕೆ ಇನ್ನೊಬ್ಬ ವ್ಯಕ್ತಿಯನ್ನಾಗಲೀ, ಬದಲಾದ ಹವಾಮಾನವನ್ನಾಗಲೀ, ಕಾರಣವನ್ನಾಗಿಯೂ ಮಾಡಿಕೊಂಡಿರುತ್ತಾರೆ. ಬಹಳಷ್ಟು ಸಂದರ್ಭಗಳಲ್ಲಿ ಅವರ ನೋವಿಗೆ ಕಾರಣ ಅವರಿಗೆ ತೀರಾ ಆಪ್ತನಾದ ಸಂಬಂಧಪಟ್ಟ ವ್ಯಕ್ತಿಯೇ ಆಗಿರುತ್ತಾರೆ. ಆ ವ್ಯಕ್ತಿಯ ಬಗ್ಗೆ ಅಥವಾ ಕಾರಣದ ಬಗ್ಗೆ ಅವರು ಆಗಾಗ ಸೂಚ್ಯವಾಗಿ ಹೇಳುತ್ತಲೂ ಇರುತ್ತಾರೆ. ಆದರೆ ಸ್ಪಷ್ಟವಾಗಿ ಮಾತ್ರ ಆ ವ್ಯಕ್ತಿಯ ಬಗ್ಗೆ ಅವರು ಹೇಳುವುದಿಲ್ಲ.

